5
ಬೆಂಗಳೂರು ಉದಯವಾಣಿ
ಶನಿವಾರ, ಡಿಸೆಂಬರ್ 14, 2019

# ಆರ್ಥಿಕತೆ ಕುರಿತು ಸಮ್ಮೇಳನ

## ಕ್ರಿಸ್ತು ಜಯಂತಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮ

ಕೆ.ಆರ್.ಪುರ: ಸಮೀಪದ ಕ್ರಿಸ್ತು ಜಯಂತಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಭಾರತೀಯ ಆರ್ಥಿಕತೆಯ ರಾಷ್ಟ್ರೀಯ ಸಮ್ಮೇಳನ- ಕೈಗಾರಿಕಾ ಕ್ರಾಂತಿ 4.0 ಕಾರ್ಯಕ್ರಮವನ್ನು ಟೊಯೋಟಾ ಇಂಡಸ್ಟ್ರೀಸ್ ಉಪ ವ್ಯವಸ್ಥಾಪಕ ನಿರ್ದೇಶಕ ಟಿ. ಆರ್.ಪರಶುರಾಮನ್ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಭಾರತದ ಆರ್ಥಿಕ ವ್ಯವಸ್ಥೆ ಉತ್ತಮ ರೀತಿಯಲ್ಲಿ ಬೆಳವಣಿಗೆ ಹೊಂದುತ್ತಿದೆ. ಅದಕ್ಕೆ ತಕ್ಕಂತೆ ಆನ್ ಲೈನ್ ಮಾರುಕಟ್ಟೆ ವ್ಯವಸ್ಥೆ ಜನರಿಗೆ ಸುಲಭವಾಗಿ ದೊರೆಯುತ್ತಿದೆ. ಇದೇ ವೇಳೆ ಸೈಬರ್ ಸುರಕ್ಷತೆಗೆ ಸರ್ಕಾರ ಒತ್ತು ಕೊಡಬೇಕಿದೆ ಎಂದರು.

ಸಣ್ಣ ಉದ್ಯಮಗಳ ಘಟಕ, ಪರಿಣಾಮ, ಪ್ರಸ್ತುತ ಕೈಗಾರಿಕಾ ಕ್ರಾಂತಿ ಹಾಗೂ ಸವಾಲುಗಳ ಕುರಿತು ವಿಶೇಷ ಉಪನ್ಯಾಸಗಳ ಮೂಲಕ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು. ಉಪ ಪ್ರಾಂಶುಪಾಲ ರೆ.ಡಾ.ಆಗಸ್ಟೀನ್ ಜಾರ್ಜ್, ವಾಣಿಜ್ಯ ನಿರ್ವಹಣಾ ವಿಭಾಗದ ಮುಖ್ಯಸ್ಥ ಡಾ.ಅಲೋಶಿಯಸ್ ಎಡ್ವರ್ಡ್, ವಾಣಿಜ್ಯ ವಿಭಾಗದ ಉಪನ್ಯಾಸಕರಾದ ವಿಜಯ್ ಚಾಂದ್, ಕೆ.ವಿನೋದಾದೇವಿ ಇದ್ದರು.



ಕ್ರಿಸ್ತು ಜಯಂತಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಕೈಗಾರಿಕಾ ಕ್ರಾಂತಿ 4.0 ಕಾರ್ಯಕ್ರಮವನ್ನು ಟೊಯೋಟಾ ಇಂಡಸ್ಟ್ರೀಸ್‌ನ ಟಿ. ಆರ್.ಪರಶುರಾಮನ್ ಉದ್ಘಾಟಿಸಿದರು. ರೆ.ಡಾ.ಆಗಸ್ಟೀನ್ ಜಾರ್ಜ್, ಡಾ.ಅಲೋಶಿಯಸ್ ಎಡ್ವರ್ಡ್ ಇದ್ದರು.